




# ಗಾಜಿನ ಉದ್ಯಾನ

ಅಮೆರಿಕದ ಉತ್ತರ–ಪಶ್ಚಿಮ ಕಡಲ ತೀರದ ಸಿಯಾಟೆಲ್, ಕಾರ್ಪೊರೇಟ್ ಜಗತ್ತಿನಲ್ಲಿ ಚಿರಪರಿಚಿತ. ಆದರೆ, ಗಾಜಿನ ಬೃಹತ್ ಸುಂದರ ಕಲಾಕೃತಿಗಳನ್ನು ಹೊಂದಿರುವ ಇಲ್ಲಿನ ಅಪರೂಪದ ತಾಣ ಅಷ್ಟೇನೂ ಪರಿಚಿತವಾದುದಲ್ಲ.

ಇಲ್ಲಿನ ಪ್ರವಾಸಿ ತಾಣಗಳಲ್ಲಿ ಅತ್ಯಂತ ವರ್ಣರಂಜಿತ ಮತ್ತು ಆಕರ್ಷಕವಾದದ್ದು ‘ಚಿಹುಲಿ ಗ್ಲಾಸ್ ಗಾರ್ಡನ್’. ಸಿಯಾಟೆಲ್‌ನಲ್ಲಿನ ಸ್ಪೇಸ್ ನೀಡಲ್ ಸಮೀಪವೇ ವಿರಾಜಿಸುವ ಈ ಗಾರ್ಡನ್ ನಿರ್ಮಿಸಿದವರು ಡೇಲ್ ಚಿಹುಲಿ. ‘ಬ್ಲೋ ಗ್ಲಾಸ್ ಶಿಲ್ಪಿ’ ಎಂದೇ ಜಗತ್ತಿನಾದ್ಯಂತ ಹೆಸರು ಮಾಡಿದ ಡೇಲ್, ಊದುವ ಗಾಜಿನ ಹಲವು ಆಕರ್ಷಕ ಶಿಲ್ಪಗಳನ್ನು ವಿನ್ಯಾಸಗೊಳಿಸಿದವರು.

ಡೇಲ್ ಅವರು ವಿನ್ಯಾಸಗೊಳಿಸಿರುವ ಗಾಜಿನ ಶಿಲ್ಪಗಳು ಊದಿದ ಗಾಜಿನ (**blown glass**) ಕ್ಷೇತ್ರದಲ್ಲಿ ಅನನ್ಯ ಕಲಾತ್ಮಕತೆಯಿಂದ ಪ್ರಸಿದ್ಧವಾಗಿವೆ. ಹಾಗೇ ಚಿಹುಲಿ ಗಾಜಿನ ಉದ್ಯಾನದಲ್ಲಿಯೂ ಸೊಗಸಾಗಿ ಅರಳಿ ನಿಂತ ಕಲಾತ್ಮಕ ಗಾಜಿನ ಶಿಲ್ಪಗಳಿವೆ. ಸುಂದರ ಹೂವುಗಳಂತೆ, ಚಿಟ್ಟೆ, ಹಕ್ಕಿಗಳಂತೆ, ತರು ಲತೆಗಳಂತೆ, ಒಟ್ಟಾರೆ ಪ್ರಕೃತಿಯೇ ಮೈದಳೆದಂತೆ ತೋರುವ ನೂರಾರು ಆಕರ್ಷಕ ಕಲಾಕೃತಿಗಳಿವೆ. ಸಣ್ಣ ಪುಟ್ಟ ಕಲಾಕೃತಿಗಳಿಂದ ಹಿಡಿದು ಇಪ್ಪತ್ತು ಅಡಿಗಳಿಗಿಂತ ಹೆಚ್ಚು ಎತ್ತರವಿರುವ ಶಿಲ್ಪಗಳೂ ಇಲ್ಲಿವೆ. ಇವೆಲ್ಲವೂ ನೋಡುಗರನ್ನು ಕಲ್ಪನಾಲೋಕಕ್ಕೆ ಎಳೆದೊಯ್ಯುವಂತಿವೆ.

ಉದ್ಯಾನವು ಒಂದು ಸುಸಜ್ಜಿತ ಗಾಜಿನ ಮನೆ

**ಸಿಯಾಟೆಲ್‌ನಲ್ಲಿನ ‘ಚಿಹುಲಿ ಗ್ಲಾಸ್ ಗಾರ್ಡನ್’ ಸುಂದರ ಗಾಜಿನ ಕಲಾಕೃತಿಗಳಿಂದ ಕಲ್ಪನಾ ಲೋಕವನ್ನೇ ಸೃಷ್ಟಿಸಿದಂತಿದೆ. ಬಣ್ಣ ಬಣ್ಣದ ಗಾಜಿನ ಕಲಾಕೃತಿಗಳು ಕಣ್ಮನ ತುಂಬುತ್ತವೆ.**

■ ಪ್ರಕಾಶ ಹೆಗಡೆ

ಹೊಂದಿದೆ. ಬದಿಯಲ್ಲೇ ಎಂಟು ಗ್ಯಾಲರಿಗಳು ಮತ್ತು ಮೂರು ರೇಖಾಚಿತ್ರ ಗೋಡೆಗಳನ್ನು ಹೊಂದಿರುವ ಪ್ರದರ್ಶನ ಸಭಾಂಗಣವಿದೆ. ಉದ್ಯಾನದಲ್ಲಿ ಅಸಂಖ್ಯ ಆಕಾರದ, ಅಪರಿಮಿತ ಆಲೋಚನೆಗಳ, ಅದ್ಭುತ ಬಣ್ಣ ಸಂಯೋಜನೆಯ ಗಾಜಿನ ಶಿಲ್ಪಗಳು ಕಣ್ಮನ ಕೋರೈಸುವಂತಿವೆ. ವಿವಿಧ ಪರಿಕಲ್ಪನೆಗೆ ಪೂರಕವಾಗಿ ಗಾಜಿನ ಕಲಾಕೃತಿಗಳನ್ನು ಅಲಂಕರಿಸಲಾಗಿದೆ.



ಗಾಜಿನ ಉದ್ಯಾನ ಮಾತ್ರವಲ್ಲ, ಕಲಾಕೃತಿಗಳಲ್ಲಿ ಕೈಚಳಕ ತೋರಿರುವ ಡೇಲ್ ಚಿಹುಲಿ ಅವರ ಕಥೆಯೂ ಸ್ಫೂರ್ತಿದಾಯಕ. ಡೇಲ್ ಪ್ಯಾಟ್ರಿಕ್ ಚಿಹುಲಿ ವಾಷಿಂಗ್ಟನ್‌ನ ಟಕೋಮಾದಲ್ಲಿ ಜನಿಸಿದರು. ಕಾಲೇಜು ದಿನಗಳಲ್ಲಿ ಗಾಜನ್ನು ಕರಗಿಸುವುದು ಮತ್ತು ಬೆಸೆಯುವ ಕಲೆಯನ್ನು ಕಲಿತರು. ಕಾಲೇಜಿನ ಕಲಿಕೆ ಇಷ್ಟವಾಗದೇ ಗಾಜಿನ ಕಲೆಯ ಬಗ್ಗೆ ಕಲಿಯಲು ಇಟಲಿಯ ಫ್ಲಾರೆನ್ಸ್‌ಗೆ ತೆರಳಿದರು. ಗ್ಲಾಸ್ ಬ್ಲೋಯಿಂಗ್ ಕಲೆಯ ಬಗ್ಗೆ ಕಲಿತು, ವಾಷಿಂಗ್ಟನ್‌ಗೆ ಮರಳಿ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಡಿಗ್ರಿ ಪಡೆದರು. ಆದರೆ, ಅಪಘಾತವೊಂದರಲ್ಲಿ ಸಿಡಿದ ಗಾಜಿನಿರಿತದಿಂದ ತನ್ನ ಎಡಗಣ್ಣನ್ನು ಕಳೆದುಕೊಂಡು, ಬಾಡಿಸರ್ಫಿಂಗ್ ಅಪಘಾತದಲ್ಲಿ ಶಾಶ್ವತವಾಗಿ ಬಲ ಭುಜದ ಸ್ವಾಧೀನ ಕಳೆದುಕೊಂಡರು. ಈ ಅಪಘಾತಗಳಿಂದಾಗಿ ಅವರು ಸ್ವತಃ ಗಾಜು ಊದುವ ಪೈಪ್ ಹಿಡಿದು ಕಲಾಕೃತಿಗಳನ್ನು ನಿರ್ಮಿಸಲು ಸಾಧ್ಯವಿರಲಿಲ್ಲ. ಧೃತಿಗೆಡದೆ, ಗ್ಲಾಸ್ ಬ್ಲೋವರ್ ಕಾರ್ಮಿಕರನ್ನು ನೇಮಿಸಿಕೊಳ್ಳುವ ಮೂಲಕ ಅವರಿಗೆ ತರಬೇತಿ ನೀಡಿ ಅಸಾಧ್ಯವಾದದ್ದನ್ನು ಸಾಧಿಸಿದರು. ತಮ್ಮ 82ನೇ ವಯಸ್ಸಿನಲ್ಲಿಯೂ ಉದ್ಯಮಿಯಾಗಿ ಯಶದ ಹಾದಿಯಲ್ಲಿ ಸಾಗುತ್ತಲೇ ಇದ್ದಾರೆ.

ಸಿಯಾಟೆಲ್, ಬೃಹತ್ ಕಂಪನಿಗಳ ಹೆಡ್‌ಕ್ವಾರ್ಟರ್ಸ್ ಮಾತ್ರವಲ್ಲ, ಈ ಸುಂದರ ಗಾಜಿನ ಉದ್ಯಾನದಿಂದಲೂ ಮೆರುಗು ಪಡೆದುಕೊಂಡಿದೆ ಎಂಬುದು ಅತಿಶಯೋಕ್ತಿಯಲ್ಲ.

ಪ್ರತಿಕ್ರಿಯಿಸಿ: **feedback@sudha.co.in**